

ಕೂಡ ಹೀಗೇ ಗಿಡವಾಗಿ ಬಳ್ಳಿಯಾಗಿ ಹೂವಾಗಿ ಆ ರಾಜಕುಮಾರನಿಗೆ ದಾರಿತೋರಿಸಿರಬಹುದಲ್ಲವೇ ಎಂದುಕೊಂಡಳು. ದೈತ್ಯನಿಂದ ತಪ್ಪಿಸಿಕೊಂಡು ಕುದುರೆ ಮೇಲೆ ಅತಿವೇಗದಲ್ಲಿ ಬರುತ್ತಿರುವುದನ್ನು ಕಲ್ಪಿಸಿ ಕೊಂಡಳು. 'ಹೇ ಚಾಂಪಿಯನ್, ಮತ್ತೆ ಕನಸು ಕಾಣುತ್ತಾ ಓಲಾಡಬೇಡ... ಬ್ಯಾಲನ್ಸು ತಪ್ಪಿ ಬೀಳ್ಬೇಕಾಗುತ್ತೆ, ಬೆಳಗ್ಗೆ ಆದ ಹಾಗೇ!' ಅಂದ. ಸುಮಿ ಸುಮ್ಮನೇ ನಕ್ಕಳು.

'ವಟವಟ ಅನ್ನುವವಳು ಮಾತೇ ಬಿದ್ದು ಹೋದಂಗೆ ಸುಮ್ನಿದ್ದಿಯಲ್ಲೇ, ಚಾಂಪಿಯನ್ ಆದಕೂಡ್ಲೇ ಅಟಿಟ್ಯೂಡೇ ಚೇಂಜು.ಇದೊಳ್ಳೆ ಕಥೆಯಾಯ್ತು!' ಅಂದ. 'ಹೌದು ಇದೊಳ್ಳೆ ಕಥೆನೇ...' ಅಂದು ಸುಮ್ಮನಾದಳು.

ನಾಳೆ ಸ್ಕೂಲಿನಲ್ಲಿ ಕಥಾಸ್ಪರ್ಧೆಗಾಗಿ ಕಥೆ ಕಲ್ಪಿಸಿಕೊಳ್ಳುತ್ತಿರಬಹುದು ಎಂದು ರಮಿತ ಊಹಿಸಿದ. 'ನಾಳೆ ಕಥೆನೂ ಬರೀತೀಯಾ? ಹೆಸರೇನೆ?'ಎಂದ. ಸುಮಿ 'ಒಂದು ಮುಟ್ಟಿನ ಕಥೆ' ಎಂದಳು.

'ಶ್ಶೀಶ್ಶೀ, ಖೋಖೋ ಆಡುವಾಗ ಯಾರಾದ್ರೂ ನಿನ್ನ ನಾಲಿಗೆ ಹಿಡಿದು ಎಳೆದ್ರಾ? ತಪ್ಪುತಪ್ಪು ಉಚ್ಚಾರ ಮಾಡ್ತಿಯಲ್ಲೇ.....ಅದು ಒಂದು ಮುತ್ತಿನ ಕಥೆ ಮಾರಾಯ್ತಿ...ಒಂದು ಮುತ್ತಿನ ಕಥೆ' ಎಂದು ದೊಡ್ಡದಾಗಿ ನಕ್ಕ. ಅವನ ಗೊಗ್ಗರು ಧ್ವನಿಯ ನಗು ಕೂಡ ಸುಮಿಗೆ ಇಷ್ಟವಾಯಿತು.

'ಕೆಪ್ಪ, ನಾನು ಬರೆಯೋದು ಒಂದು ಮುಟ್ಟಿನ ಕಥೆನೇ. ಕಥೆಗೆ ಬಹುಮಾನ ಬಂದ್ರೆ ಜಾಸ್ಮಿನ್ ಮಿಸ್ ಕ್ಲಾಸಲ್ಲಿ ಓದಿಸ್ತಾರೆ. ಆಗ ಎಲ್ರೂ ಶ್ಶೀಶ್ಶೀ ಬದಲಿಗೆ ಶಹಬ್ಬಾಸ್ ಅಂತಾರೆ. ನೀನೂ ಓದು, ಜಾಣ ಆಗ್ತಿಯೋ ನೋಡ್ವಾ' ಎಂದು ಬೆಳಗ್ಗೆ ಪೆಟ್ಟು ತಿಂದ ರಮಿತನ ಕೆನ್ನೆ ತಟ್ಟಿದಳು.

ಸುಮಿಯ ಸ್ಪರ್ಶಕ್ಕೆ ರಮಿತನ ಮನಸ್ಸು ಅದೆಷ್ಟು ಹಗುರಾಯ್ತು ಅಂದರೆ, ಸೈಕಲ್ಲಿಗೆ ರೆಕ್ಕೆ ಮೂಡಿ ಆಕಾಶದಲ್ಲಿ ಹಾರುತ್ತಿರುವಂತೆ ಅನಿಸಿತು!

●